ವಿಷಯ: (ii) ಮೈಸೂರು ಪೇಪರ್ ಮಿಲ್ಸ್‌ನಲ್ಲಿ ಬಗಾಸ್ ಯಾರ್ಡ್‌ಗೆ ಬೆಂಕಿ ಬಿದ್ದಿರುವ ಬಗ್ಗೆ.

+ ಶ್ರೀ ಆರಗ ಜ್ಞಾನೇಂದ್ರ: ಮೈಸೂರು ಪೇಪರ್ ಮಿಲ್ಸ್‌ನಲ್ಲಿ ಬಗಾಸ್ ಯಾರ್ಡ್‌ಗೆ ಬೆಂಕಿ ಬಿದ್ದಿರುವ ಬಗ್ಗೆ ಕೈಗಾರಿಕಾ ಸಚಿವರು ಹೇಳಿಕೆ ಕೊಡಬೇಕಾಗಿತ್ತು.

ಶ್ರೀ ಆರ್.ವಿ. ದೇಶಪಾಂಡೆ(ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೇ, ಮೈಸೂರು ಪೇಪರ್ ಮಿಲ್ಸ್‌ನಲ್ಲಿ ಪೇಪರ್ ಮತ್ತು ಬಗಾಸ್ ಎಂದು ಎರಡು ಕಾರ್ಖಾನೆಗಳಿವೆ. ಬಗಾಸ್‌ನಲ್ಲಿ ಡ್ರೈ ಬಗಾಸ್ ಯಾರ್ಡ್ ಮತ್ತು ವೆಟ್ ಬಗಾಸ್ ಯಾರ್ಡ್ ಎಂದು ಇದೆ. ನಿನ್ನೆ 1.15ಕ್ಕೆ ಡ್ರೈ ಬಗಾಸ್ ಯಾರ್ಡ್‌ಗೆ ಅಚಾನಕ್ ಆಗಿ ಬೆಂಕಿ ಬಿದ್ದಿದ್ದು ಅದರಿಂದ 85 ಸಾವಿರ ಟನ್ ಡ್ರೈ ಬಗಾಸ್ ನಾಶವಾಗಿದೆ. ಬೆಂಕಿ ಬಿದ್ದ ತಕ್ಷಣ ಶಿವಮೊಗ್ಗ ಮತ್ತು ಸುತ್ತಮುತ್ತಲ ಜಿಲ್ಲೆಗಳಿಂದ ಅಗ್ನಿಶಾಮಕ ದಳದವರು ಬಂದು ಬೆಂಕಿಯನ್ನು ಹತೋಟಿಗೆ ತರಲು ಪ್ರಯತ್ನ ಮಾಡಲಾಗಿದೆ. ಶುಗರ್ ಫ್ಯಾಕ್ಟರಿಗೆ ಅಥವಾ ಪೇಪರ್ ಮಿಲ್‌ಗೆ ಅಥವಾ ಟಿಂಬರ್ ಯಾರ್ಡ್‌ಗೆ ಯಾವುದೇ ರೀತಿಯಾದ ಹಾನಿಯಾಗಿಲ್ಲ. ನಾಶವಾಗಿರುವ 85 ಸಾವಿರ ಟನ್ ಬಗಾಸ್‌ನ ಅಂದಾಜು ಬೆಲೆ ಸುಮಾರು 7 ಕೋಟಿ ರೂಪಾಯಿಗಳಾಗಬಹುದು. ಅದು ಪೂರ್ತಿ ಇನ್ಷೂರ್ಡ್ ಆಗಿದೆ. ಬೆಂಕಿ ಏಕೆ ಹತ್ತಿತ್ತು ಎನ್ನುವ ಬಗ್ಗೆ ತನಿಖೆ ಮಾಡಲು ಡೈರೆಕ್ಟರ್-ಫಾರೆಸ್ಟ್ ಇವರಿಗೆ ಆದೇಶ ನೀಡಲಾಗಿದೆ. ಇದರ ಬಗ್ಗೆ ಪೋಲೀಸರಿಗೆ ಸಹ ಕಂಪ್ಲೈಂಟ್ ಕೊಟ್ಟು ಇನ್‌ವೆಸ್ಟಿಗೇಷನ್ ಸಹ ಪ್ರಾರಂಭ ಮಾಡಲಾಗಿದೆ.

ಶ್ರೀ ಆರಗ ಜ್ಞಾನೇಂದ್ರ: ಈ ನಮ್ಮ ಸರ್ಕಾರದ ಬಹಳ ಹೆಮ್ಮೆಯ ಒಂದು ಕೈಗಾರಿಕೆ ಅದು ಸಾರ್ವಜನಿಕ ಉದ್ಯಮದಲ್ಲಿರುವ ಎಲ್ಲಾ ಕೈಗಾರಿಕೆಗಳು ನಷ್ಟ ಅನುಭವಿಸುತ್ತಿರುವಂಥ ಸಂದರ್ಭದಲ್ಲಿ, ಈ ಕೈಗಾರಿಕೆ ಕಳೆದ ವರ್ಷ ಸುಮಾರು 20-25 ಕೋಟಿ ರೂಪಾಯಿಗಳ ಲಾಭವನ್ನು ಗಳಿಸಿತ್ತು. ಅಲ್ಲಿನ ಕಾರ್ಮಿಕರು ಬಹಳ ಶ್ರಮಪಟ್ಟು ಆ ಸಂಸ್ಥೆಯ ಗೌರವವನ್ನು ಕಾಪಾಡಿದ್ದಾರೆ. ಆದರೆ, ಅಲ್ಲಿಯ ಕೆಲವು ಅಧಿಕಾರಿಗಳ ನಿರ್ಲಕ್ಷ್ಯತನದಿಂದ ಇಂಥ ಅನೇಕ ಅನಾಹುತಗಳು ಹಲವಾರು ವರ್ಷಗಳಿಂದ ನಡೆಯುತ್ತಿವೆ. ಅಲ್ಲಿ ಮೂರನೇ ಸಾರಿ ಬೆಂಕಿ ಬಿದ್ದಿದೆ. ಕಳೆದ ವರ್ಷ 1,2 ಮತ್ತು 3ನೇ ಘಟಕದಲ್ಲಿ ಬೆಂಕಿ ಬಿದ್ದಿತ್ತು. 1986-87ರಲ್ಲಿ ಉಜಿನಿಪುರದಲ್ಲಿ ಬಗಾಸ್ ಯಾರ್ಡ್‌ಗೆ ಬೆಂಕಿ ಬಿದ್ದಿತ್ತು. ಈ ಸಾರಿ ಬಿದ್ದ ಬೆಂಕಿ ಆರಿಸಲು ಸಾಧ್ಯವಾಗದಿರುವ ಪರಿಸ್ಥಿತಿ ಇದೆ. ಮಾನ್ಯ ಮಂತ್ರಿಗಳ ಪ್ರಕಾರ, ಅಲ್ಲಿ ಏಳೂವರೆ ಕೋಟಿ ರೂಪಾಯಿಗಳ ನಷ್ಟವುಂಟಾಗಿದೆ. ಇನ್ನೂ ಸಂಪೂರ್ಣ ಅಂದಾಜು ಮಾಡಿದ ನಂತರ ಅದು ಎಷ್ಟಾಗುತ್ತದೆಯೋ ಗೊತ್ತಿಲ್ಲ. ನಿನ್ನೆ ಅದು ಸ್ವಲ್ಪ ಕಂಟ್ರೋಲಿಗೆ ಬಂದಿದ್ದರೆ ಸರಿ. ಇಲ್ಲವಾದಲ್ಲಿ, ಹೆಚ್ಚುಕಡಿಮೆಯಾಗಿದ್ದರೆ ಇಡೀ ಎಂಪಿಎಂ ಕಾರ್ಖಾನೆ ಸುಟ್ಟು ಭಸ್ಮವಾಗುತ್ತಿತ್ತು. ಎಲ್ಲದಕ್ಕಿಂತ ಹೆಚ್ಚಾಗಿ ಅಲ್ಲಿ ಕಾಂಪೌಂಡ್ ಇಲ್ಲ. ಕೋಟಿಗಟ್ಟಲೆ ಮೆಟೀರಿಯಲ್ಸ್‌ನ್ನು ಸ್ಟಾಕ್ ಮಾಡುವುದಕ್ಕೆ ಕಾಂಪೌಂಡ್ ಇಲ್ಲ, ಒಂದು ಚಿಕ್ಕ ಬೇಲಿಯೂ ಇಲ್ಲ. ಸಾರ್ವಜನಿಕ ಹಣವನ್ನು ಯಾವ ರೀತಿ ಇಡುತ್ತಾರೆ? ಅಲ್ಲಿ ಅಧಿಕಾರಿಗಳಿಗೆ ಯಾವ ರೀತಿಯ ಜವಾಬ್ದಾರಿ ಇದೆ? ಅಲ್ಲಿ ಜನಜಾನುವಾರುಗಳು ಓಡಾಡುತ್ತಿದ್ದು, 3 ವರ್ಷಗಳಿಂದ ಈ ಬಗಾಸ್ ಸ್ಟಾಕ್ ಇದೆ. ಬೇರೆ ಬೇರೆ ಇಂಡಸ್ಟ್ರಿಗಳವರು ಬಂದು ಕೇಳಿದರೂ ಕೂಡ ಇದನ್ನು ಕೊಡಲಿಲ್ಲ. ಅಲ್ಲಿ ನಡೆದಿರುವ 64 ಕೋಟಿ ರೂಪಾಯಿಗಳ ಹಗರಣದ ಬಗ್ಗೆ

ಹಿಂದಿನ ದಳ ಸರ್ಕಾರವಿದ್ದಾಗ ಇಲ್ಲಿ ಚರ್ಚೆಯಾಗಿತ್ತು. ಅದರ ಬಗ್ಗೆ ಎನ್‌ಕ್ವೆಯರಿ ರಿಪೋರ್ಟ್ಸ್ ಬಂದಿವೆ. ನಿಮ್ಮಲ್ಲಿರುವ ಅಧಿಕಾರಿಗಳಿಗೆ, ಅಲ್ಲಿನ ಷುಗರ್‌ಫ್ಯಾಕ್ಟರಿ ಬಗಾಸ್ ಏನಿದೆ ಅದನ್ನು ಉಪಯೋಗಿಸುವುದಕ್ಕಿಂತ ಅಸ್ಸಾಂನಿಂದ ಬಿದಿರು, ನಿವೇಶನದಿಂದ ಪಲ್ಪ್ ತರುವುದರಲ್ಲೇ ಹೆಚ್ಚು ಲಾಭ. ಕೆಲವು ಅಧಿಕಾರಿಗಳು ಕೋಟ್ಯಾಧೀಶರಾಗಿದ್ದಾರೆ. ಆ ಲಾಭಕ್ಕೋಸ್ಕರ, ಉದ್ದೇಶಪೂರ್ವಕವಾಗಿ ಬೆಂಕಿ ಹಚ್ಚಿದ್ದಾರೆನ್ನುವಂಥ ವಿಚಾರವನ್ನು ಸಾಮಾನ್ಯ ಜನರು ಭದ್ರಾವತಿಯಲ್ಲಿ ಮಾತನಾಡುತ್ತಿದ್ದಾರೆ. ಇಡೀ ಕಾರ್ಮಿಕ ವೃಂದ ಅತ್ಯಂತ ಬೇಸರಕ್ಕೆ ಒಳಗಾಗಿದ್ದಾರೆ. ಈ ತರಹದ ನಿಕೃಷ್ಟ ಅಧಿಕಾರಿಗಳಿದ್ದಾರೆ. ಅಲ್ಲಿಯ ಅಧ್ಯಕ್ಷರು ಘಟನೆ ನಡೆದಾಗ ಶೃಂಗೇರಿಯಲ್ಲಿದ್ದರು. ಅದು ಭಾರೀ ದೂರವೇನಿಲ್ಲ. ಮಾನ್ಯ ಸಚಿವರು ಹೇಳಿದ ಹಾಗೆ, ಬೆಂಕಿ ಇದ್ದ ಬಗ್ಗೆ ಅವರಿಗೆ ಒಂದೂವರೆ ಗಂಟೆಗೆ ಗೊತ್ತಾಗಿದೆ. ಶೃಂಗೇರಿಗೆ ಫೋನ್ ಮಾಡಿದರೆ, ಸಂಜೆ 6 ಗಂಟೆಗೂ ಅವರು ಬರಲಿಲ್ಲವೆಂದರೆ, ಅವರಿಗೆ ಇಂಡಸ್ಟ್ರಿ ಬಗ್ಗೆ ಅದರ ಹೊಣೆ ಹೊತ್ತಿರುವ ಅಧಿಕಾರಿ ಯಾವ ರೀತಿ ಬೇಜಾವಾಬ್ದಾರಿಯಿಂದ ವರ್ತಿಸುತ್ತಾರೆಂದು ನೋಡಬೇಕಾಗುತ್ತದೆ. ಇನ್ನೊಬ್ಬ ಅವರ ಮುಂದಿನ ಅಧಿಕಾರಿ ರಜೆಯ ಮೇಲಿದ್ದಾರೆ. ಇದರ ಹಿಂದಿರುವ ಉದ್ದೇಶವೇನು? ಟಿ.ಜಿ. ಫರ್ನಿಷ್ ಬಾಯ್ಲರ್ ಕೆಟ್ಟು ನಿಂತು ಒಂದೂವರೆ ವರ್ಷಗಳಾಗಿವೆ. ಅದನ್ನು ದುರಸ್ಥಿಪಡಿಸಲಿಲ್ಲ. ಅಲ್ಲಿ ಸಾಕಷ್ಟು ಸ್ಟಾಕ್ ಇದೆ. ಇತ್ತೀಚೆಗೆ ಪಾಂಡವಪುರ ಕಾರ್ಖಾನೆಯಲ್ಲಿ ಸಕ್ಕರೆ ಮೂಟೆಗೆ ಬೆಂಕಿ ಹಚ್ಚಿತ್ತು. ಅದರಲ್ಲಿ 5 ಕೋಟಿ ರೂಪಾಯಿಗಳು ನಷ್ಟವಾಗಿದೆ. ಈ ರೀತಿ ಬೇಸಿಗೆಯಲ್ಲಿ ಈ ಪರಿಸ್ಥಿತಿಯಾಗುತ್ತದೆ ಎಂದು ಗೊತ್ತಿದ್ದರೂ, ಎಚ್ಚರಿಕೆ ಏಕೆ ವಹಿಸಲಿಲ್ಲ? ಆ ಯಾರ್ಡನ್ನು ಕಾಯುವ ವ್ಯವಸ್ಥೆ ಏಕೆ ಮಾಡಲಿಲ್ಲ? ಆ ಯಾರ್ಡ್‌ಗೆ ಕಾಂಪೌಂಡ್ ಏಕೆ ಹಾಕಲಿಲ್ಲ? 20-25 ಕೋಟಿ ರೂಪಾಯಿಗಳ ಮೆಟಿರೀಯಲ್ಸ್‌ನ್ನು ಸ್ಟಾಕ್ ಮಾಡಿರುವ ಯಾರ್ಡ್‌ನಲ್ಲಿ 20-25 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಕಾಂಪೌಂಡ್ ಕಟ್ಟಬಹುದು. ಇಷ್ಟು ವರ್ಷಗಳಾದರೂ ಏನು ಮಾಡದಿರುವ ಉದ್ದೇಶವೇನು? ಬೆಂಕಿ ಬಿದ್ದಿರುವ ಬಗ್ಗೆ ಸಮಗ್ರ ಎನ್‌ಕ್ವಯರಿಯಾಗಬೇಕು. ಫ್ಯಾಕ್ಟರಿ ಹಿಂದೆ ಹೊಣೆ ಹೊತ್ತಿರುವ ಮುಖ್ಯಾಧಿಕಾರಿಗಳು ರಾ-ಮೆಟಿರೀಯಲ್ಸ್‌ನ್ನು ಪರ್ಚೇಸ್ ಮಾಡಿ, ಹೊರದೇಶಕ್ಕೆ ಟೂರ್ ಹೋಗುವುದು, ಇವರು ಮೇಜವಾನಿ ಮಾಡುವುದಕ್ಕೆ ಪ್ರತಿವರ್ಷ ಕೋಟಿಗಟ್ಟಲೆ ಖರ್ಚು ಮಾಡುವುದು, ಅವರಿಂದ ಕಮಿಷನ್ ಪಡೆಯುವ ದಂಧೆ ಬೆಳೆದು ಬಂದಿದ್ದು, ಆ ದಂಧೆಗೆ ಉಪಯೋಗವಾಗುತ್ತದೆನ್ನುವ ಕಾರಣಕ್ಕೆ ಉದ್ದೇಶಪೂರ್ವಕವಾಗಿ ಬೆಂಕಿ ಹಚ್ಚಿಸಿದ್ದಾರೆನ್ನುವುದು ಏನಿದೆ ಇದರ ಬಗ್ಗೆ ಯಾರೋ ಒಬ್ಬ ಸಾಮಾನ್ಯರಿಂದ ತನಿಖೆಯಾದರೆ ಸಾಲದು, ಉನ್ನತ ಮಟ್ಟದ ತನಿಖೆಯಾಗಬೇಕು, ಸಾಧ್ಯವಾದರೆ ಸದನ ಸಮಿತಿ ರಚಿಸಬೇಕು, ಅದರ ಮೂಲಕ ಎನ್‌ಕ್ವಯರಿಯನ್ನು ಮಾಡಿಸಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ನಾನು ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ: ಮಾನ್ಯ ಸದಸ್ಯರು ಹೇಳಿದ ಹಾಗೆ, ಎಂಪಿಎಂ ಕಾರ್ಖಾನೆ ಕಳೆದ ವರ್ಷ 25-30 ಕೋಟಿ ರೂಪಾಯಿ ಲಾಭ ಮಾಡಿತ್ತು ಎಂಬುದು ನನ್ನ ಗಮನಕ್ಕೆ ಬಂದಿಲ್ಲ. ಈ ವರ್ಷ ಇಡೀ ದೇಶದಲ್ಲಿ ನ್ಯೂಸ್‌ಪ್ರಿಂಟ್ ಪರಿಸ್ಥಿತಿ ಸ್ವಲ್ಪ ಚೆನ್ನಾಗಿದೆ. ಹಾಗಾಗಿ, ಎಲ್ಲಾ ಪೇಪರ್ಸ್‌ನವರು ಸ್ವಲ್ಪ ಹಣ ಮಾಡುತ್ತಿದ್ದಾರೆ. ಹಳೆಯ ಸರ್ಕಾರದಲ್ಲಿ 65 ಕೋಟಿ ರೂಪಾಯಿಗಳ ಹಗರಣದ ಬಗ್ಗೆ ಹೇಳಿದರು. ಅದು ನನ್ನ ಗಮನಕ್ಕೆ ಬಂದಿಲ್ಲ. ಬಗಾಸ್ ಸುಡಲು ಕಾರಣ, ಪಲ್ಪ್‌ಪ್ಪ ಇಂಪೋರ್ಟ್ ಮಾಡಲು ಎಂದು ಹೇಳಿದರು. ಬಗಾಸ್‌ಗೂ, ಪಲ್ಪ್‌ಗೂ ಯಾವ ಸಂಬಂಧವೂ ಇಲ್ಲ. ಬಗಾಸ್ ಏನು ಉಪಯೋಗವಾಗುತ್ತದೆ, ಅದನ್ನು ರೈಟಿಂಗ್

ಅಂಡ್ ಪ್ರಿಂಟಿಂಗ್ ಪೇಪರ್‌ಗೆ ಉಪಯೋಗಿಸಲಾಗುತ್ತದೆ. ಪಲ್ಪ್‌ನ್ನು ಪ್ರತಿವರ್ಷ 18-20 ಸಾವಿರ ಟನ್ ಇಂಪೋರ್ಟ್ ಮಾಡುತ್ತಾರೆ. ಬಗಾಸ್ ಇದ್ದರೂ, ಇಲ್ಲದಿದ್ದರೂ, ಪಲ್ಪ್‌ನ್ನು ಇಂಪೋರ್ಟ್ ಮಾಡಬೇಕಾಗುತ್ತದೆ. ಪ್ರತಿದಿನ ರೈಟಿಂಗ್ ಅಂಡ್ ಪ್ರಿಂಟಿಂಗ್ ಪೇಪರ್ ತಯಾರಿಸಲು ನಮಗೆ 300 ಟನ್ ಬಗಾಸ್ ಬೇಕಾಗುತ್ತದೆ. ಇಂದು ಒಂದು ಲಕ್ಷ ಟನ್ ಷುಗರ್‌ಕೇನ್ ಕ್ರಷ್ ಆದರೆ, 37 ಟನ್ ಬಗಾಸ್ ಸಾಕಾಗುತ್ತದೆ. ಈ ವರ್ಷ 4 ಲಕ್ಷ 17 ಸಾವಿರ ಟನ್ 7ನೇ ಮಾರ್ಚ್ ತನಕ ನಾವು ಕ್ರಷ್ ಮಾಡಿದ್ದೇವೆ. ಅಂದಾಜು ಒಂದು ಲಕ್ಷ 25 ಸಾವಿರ ಟನ್ ಬಗಾಸ್ ಬಂದಿದೆ. ಅದರಲ್ಲಿ ಅಂದಾಜು 65-70 ಸಾವಿರ ಟನ್ ಇನ್ನೂ ಸ್ಟಾಕ್ ಇದೆ. ಹಾಗಾಗಿ, ಮುಂದಿನ ಸೆಪ್ಟೆಂಬರ್ ತನಕ ಬಗಾಸ್ ಕೊರತೆ ಇಲ್ಲ. ವೆಟ್ ಬಗಾಸ್ ಏನು ಸುಟ್ಟು ಹೋಗಿದೆ, ಇದರ ಬಗ್ಗೆ ತನಿಖೆಯಾಗಬೇಕು. ಈಗಾಗಲೇ ಡೈರೆಕ್ಟರ್, ಫಾರೆಸ್ಟ್ ಇವರಿಗೆ ತಕ್ಷಣ ತನಿಖೆ ಮಾಡಲು ಆದೇಶ ಕೊಟ್ಟಿದ್ದೇವೆ. ಅಲ್ಲದೆ, ಹಿರಿಯ ಅಧಿಕಾರಿಗಳಿಂದಲೂ ತನಿಖೆ ಮಾಡಿಸಲು ಸಿದ್ಧರಿದ್ದೇವೆ. ಆದರಲ್ಲಿ ಯಾವ ಸಂದೇಹವೂ ಬೇಡ. ಕಾರ್ಮಿಕರು ನಮಗೆ ಸಂಪೂರ್ಣ ಸಹಕಾರ ಕೊಟ್ಟಿದ್ದಾರೆ. ನಿನ್ನೆ ಕಾರ್ಮಿಕರೆಲ್ಲರ ಸಹಕಾರ ನಮಗೆ ಸಿಗಲಿಲ್ಲವಾಗಿದ್ದರೆ ವುಡ್ ಯಾರ್ಡ್‌ಗೆ ಬೆಂಕಿ ಬೀಳುವ ಸಂಭವವಿತ್ತು. ಕಾಂಪೌಂಡ್ ಕಟ್ಟಿಸುವುದರಿಂದ ಬೆಂಕಿ ಅನಾಹುತ ತಪ್ಪಿಸಲು ಸಾಧ್ಯವಾದರೆ ಕಟ್ಟಬಹುದು. ಆದರೆ, ಹಾಗಾಗುವುದಿಲ್ಲ. ಕಾಂಪೌಂಡಿನ ಅವಶ್ಯಕತೆ ಇದ್ದರೆ ಕಟ್ಟಲು ಆದೇಶ ಕೊಡುತ್ತೇನೆ. ಬೆಂಕಿ ಏಕೆ ಹತ್ತಿತ್ತು ಎಂಬ ಬಗ್ಗೆ ಇವತ್ತು ಏನನ್ನೂ ಹೇಳಲು ಸಾಧ್ಯವಿಲ್ಲ. ಆದರ ಬಗ್ಗೆ ಎನ್‌ಕ್ವಯರಿ ಮಾಡುತ್ತಿದ್ದಾರೆ. ಹಿರಿಯ ಅಧಿಕಾರಿಗಳಿಂದಲೂ ತನಿಖೆ ಮಾಡಿಸುತ್ತೇವೆ. ನಾನು ಪುನಃ ಸದನಕ್ಕೆ ಬಂದು ಯಾವ ಕಾರಣಕ್ಕಾಗಿ ಅದಾಯಿತು ಎಂಬ ಬಗ್ಗೆ ಹೇಳುತ್ತೇನೆ. ಎನ್ಟೈರ್ ಬಗಸ್ ವೆಟ್ ಆಗಲಿ ಅಥವಾ ಡ್ರೈ ಆಗಲಿ has been fully Insured.

ಶ್ರೀ ಆರಗಜ್ಞಾನೇಂದ್ರ: ಇನ್‌ಷೂರೆನ್ಸ್ ಬರುವುದು ಬೇರೆ ವಿಚಾರ. ಇಂದು ಬಗಾಸ್‌ಗೆ ಬೆಂಕಿ ಹಚ್ಚಿಸುತ್ತಾರೆ, ಇನ್ನೊಂದಕ್ಕೆ ಬೆಂಕಿ ಹಚ್ಚಿಸುತ್ತಾರೆ. ಅಲ್ಲಿ ನಡೆಯುತ್ತಿರುವ ದಂಧೆ ಬಗ್ಗೆ ತಾವೇ ಹಿಂದಿನ ಸರ್ಕಾರದಲ್ಲಿ ಇಂಡಸ್ಟ್ರಿ ಮಿನಿಸ್ಟರ್ ಆಗಿದ್ದಿರಿ, ಹಿಂದೆ ಇಲ್ಲಿ ಸಾಕಷ್ಟು ಸಾಕ್ಷ್ಯಾಧಾರ ಸಹಿತ ಎರಡು ದಿನ ಚರ್ಚೆಯಾಗಿದೆ. ಇದನ್ನು ಸಾರ್ವಜನಿಕ ಉದ್ಯಮಗಳ ಸಮಿತಿಗೆ ಒಪ್ಪಿಸಲಾಗಿ, ಅವರಿಂದಲೂ ರಿಪೋರ್ಟ್ ಬಂದಿದೆ. ಪ್ರೂವ್ ಆಗಿದೆ. ಆ ಅಧಿಕಾರಿಯನ್ನು ಇಂದು ಎಂಎಸ್ ಬಿಲ್ಡಿಂಗ್‌ನಲ್ಲಿ ಕೆಲಸ ಮಾಡಲು ನೇಮಿಸಿದ್ದೀರಿ. ಅದು ನಿಮಗೆ ಬಿಟ್ಟಿದ್ದು. ಸಾರ್ವಜನಿಕ ಕ್ಷೇತ್ರದಲ್ಲಿ ಯಾರು ಈ ರೀತಿ ತಪ್ಪು ಮಾಡಿದ್ದಾರೆ, ಅಂಥ ಅಧಿಕಾರಿಗಳಿಗೆ ಶಿಕ್ಷೆ ಕೊಡದಿದ್ದರೆ, ಪ್ರಾಮಾಣಿಕ ಅಧಿಕಾರಿಗಳಿಗೂ ಸಹ ಕೆಟ್ಟ ಮೆಸೇಜ್ ಹೋಗುತ್ತದೆ. ನೀವು ಇದುವರೆಗೂ ಕಾಂಪೌಂಡನ್ನು ಏಕೆ ಕಟ್ಟಿಸಲಿಲ್ಲವೆನ್ನುವುದೊಂದು ಯಕ್ಷ ಪ್ರಶ್ನೆ. ಅದು ಖಿಲ್ಲಂಖಿಲ್ಲ ಮೈದಾನ. ಆದರಲ್ಲಿ ಬಗಾಸ್‌ನ್ನು ಇಟ್ಟಿದ್ದಾರೆ. ಸ್ಟಾಕ್ ಮಾಡಿರುವ ಬಿದಿರು ಕೂಡ ಸುಟ್ಟುಹೋಗಿದೆ. ಇದರ ಪರಿಣಾಮ ವೇನಾಗುತ್ತದೆ? ಮೆಟೀರೀಯಲ್ಸ್‌ನ್ನು ಇನ್ನೆಲ್ಲಿಂದ ಸಂಗ್ರಹಿಸುವುದು? ಇಂದು ಆ ಇಂಡಸ್ಟ್ರಿ ಬಹಳ ದೊಡ್ಡ ನಷ್ಟವನ್ನು ಅನುಭವಿಸಿದೆ. ಮುಂದೆ ಯಾವ ಇಂಡಸ್ಟ್ರಿಗೂ ಕೂಡ ಈ ರೀತಿಯಾಗಬಾರದು. ಇದರ ಬಗ್ಗೆ ಸದನ ಸಮಿತಿ ರಚನೆಯಾಗಲಿ, ಎನ್‌ಕ್ವಯರಿಯಾಗಲಿ. ಸಾರ್ವಜನಿಕ ಉದ್ಯಮಗಳು ಹಾಳಾಗಲು ಇಂಥ ಬೇಜವಾಬ್ದಾರಿಗಳು ಸಾಕಷ್ಟಿವೆ. ಹಿಂದಿನ ಕೈವಾಡಗಳಿರುತ್ತವೆ. ಅದನ್ನು ಹೊರತರುವ ವ್ಯವಸ್ಥೆಯಾಗಬೇಕು.

ಶ್ರೀ ಆರ್.ವಿ. ದೇಶಪಾಂಡೆ: ಅವರು ಹೇಳಿದ ಹಾಗೆ, ಯಾರು ತಪ್ಪು, ನಿರ್ಲಕ್ಷ್ಯತನ ಮಾಡುವ ಅಧಿಕಾರಿಗಳಿರುತ್ತಾರೆ, ನಮ್ಮ ಸರ್ಕಾರ ಅಂಥವರನ್ನು ಪ್ರೊಟೆಕ್ಟ್ ಮಾಡುವುದಿಲ್ಲ. ಆಲ್ಲಿನ ಸಿಎಂಡಿಯವರು ತೀರ್ಥಹಳ್ಳಿಗೆ ಕರ್ತವ್ಯದ ಮೇಲೆ ಪ್ಲಾಂಟೇಷನ್ ರಿವ್ಯು ಮಾಡಲು ತೆರಳಿದ್ದರು. He has a duty to look after the plantations there.ಆಪಾದನೆ ಮಾಡುವ ಅಧಿಕಾರ ನಿಮಗೆ ಇದೆ. ಏಕೆ ಆಪಾದನೆ ಮಾಡಿದಿರಿ ಎಂದು ನಾನು ಕೇಳುವುದಿಲ್ಲ. ಹಾಗಾದರೆ, ಅವರು ಅಲ್ಲಿಂದ ಸ್ಥಳಕ್ಕೆ ಬರಲು ಸಮಯ ಬೇಡವೇ? ಆದರೂ ಅವರು ತಕ್ಷಣ ಬಂದಿದ್ದಾರೆ. ತಾವು ಹೇಳಿದ ಹಾಗೆ, ಇದರ ಬಗ್ಗೆ ಹಿರಿಯ ಅಧಿಕಾರಿಗಳಿಂದ ತನಿಖೆ ಮಾಡಿಸಿ, ಪುನಃ ನಾನು ಸದನಕ್ಕೆ ಬಂದು, ಅದರ ವರದಿಯನ್ನೊಪ್ಪಿಸುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ: ಆ ಕಾರ್ಖಾನೆಗೆ 3ನೇ ಸಾರಿ ಬೆಂಕಿ ಬಿದ್ದಿದೆ ಎಂದು ಮಾನ್ಯ ಸದಸ್ಯರು ಹೇಳಿದರು. ಮೊದಲನೆ ಸಾರಿ ಬೆಂಕಿ ಬೀಳಲು ಕಾರಣವೇನು? ಎಂದು ತಿಳಿದೂ ಅದಕ್ಕೆ ಬೇಕಾದ ಮುಂಜಾಗ್ರತೆಯನ್ನು ತೆಗೆದುಕೊಳ್ಳಲಾಗಲಿಲ್ಲವೆ? ಆ ರೀತಿ ಮುಂಜಾಗ್ರತೆ ತೆಗೆದುಕೊಂಡಿದ್ದರೆ, 2-3ನೇ ಸಾರಿಯೂ ಬೆಂಕಿ ಬೀಳುತ್ತಿರಲಿಲ್ಲ. ಇದು ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯಲೋಪವಲ್ಲವೆ? ಆ ಅಧಿಕಾರಿಗಳ ಮೇಲೇನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಆರ್.ವಿ. ದೇಶಪಾಂಡೆ: ನನ್ನ ಮಾಹಿತಿ ಪ್ರಕಾರ, ಆ ಕಾರ್ಖಾನೆಗೆ 2ನೇ ಬಾರಿ ಬೆಂಕಿ ಬಿದ್ದಿದ್ದು, 3ನೇ ಸಾರಿ ಬಿದ್ದಿದೆ ಎಂದು ಹೇಳುತ್ತಿರುವ ಬಗ್ಗೆ ನಾನು ವೆರಿಫೈ ಮಾಡಿ ಹೇಳುತ್ತೇನೆ. ಬಗಾಸ್ ಯಾರ್ಡ್‌ಗೆ 4-5 ವರ್ಷಗಳ ಹಿಂದೆ ಒಂದು ಬಾರಿ ಬೆಂಕಿ ಬಿದ್ದಿತ್ತು. ಆದರೆ, ಬಗಾಸ್ ಎಂದರೇನು? ಕಾರ್ಖಾನೆಯಲ್ಲಿ ಕೆಲಸ ಮಾಡುವಾಗ ಬೀಡಿ ಅಥವಾ ಸಿಗರೇಟ್ ಸೇದಿದಾಗ ಬೆಂಕಿ ಹತ್ತುತ್ತದೆ. ಎಷ್ಟು ಮುಂಜಾಗ್ರತೆ ತೆಗೆದುಕೊಳ್ಳಲು ಸಾಧ್ಯವೋ ಅಷ್ಟನ್ನೂ ತೆಗೆದುಕೊಳ್ಳುತ್ತಾರೆ. ಇನ್‌ವೆಸ್ಟಿಗೇಷನ್ ಮಾಡುತ್ತಿದ್ದು, ಅದರಲ್ಲಿ ಬೇಕಾದಷ್ಟು ಸಲಹೆ ತೆಗೆದುಕೊಳ್ಳುತ್ತೇವೆ. ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಇನ್ನೂ ಹೆಚ್ಚಿನ ಕ್ರಮ ತೆಗೆದುಕೊಳ್ಳಲು ಪ್ರಯತ್ನಿಸುತ್ತೇವೆ.

ವಿಷಯ: (iii) ನಗರ ಸಭೆ, ಪುರಸಭೆಗಳ ಚುನಾವಣೆ ಕುರಿತು

+ಶ್ರೀ ಡಿ.ಬಿ. ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಪ್ರಸ್ತುತ ಚುನಾಯಿತ ಸದಸ್ಯರ ಅಡಳಿತಾವಧಿ ಮುಗಿದಿದೆ. ಆದ್ದರಿಂದ, ಹೊಸದಾಗಿ ಚುನಾವಣೆ ನಡೆಸಬೇಕೆಂದು ಸರ್ಕಾರ ಹಿಂದೆಯೇ ಕ್ರಮ ತೆಗೆದುಕೊಂಡಿತ್ತು. ಸದಸ್ಯರೊಬ್ಬರು ಉಚ್ಚನ್ಯಾಯಾಲಯಕ್ಕೆ ಹೋಗಿ ಅಲ್ಲಿಂದ ತಾತ್ಕಾಲಿಕವಾಗಿ ತಡೆಯಾಯಿತು. ಈಗ ಚುನಾವಣೆ ನಡೆಸಬೇಕೆಂದು ಆದೇಶ ಕೊಟ್ಟಿದ್ದಾರೆ. ಆಯಾಯ ಕಾಲಕ್ಕೆ ಸರಿಯಾಗಿ 148 ನಗರಸಭೆಗಳಿಗೆ ಚುನಾವಣೆ ನಡೆಸಲಾಗುವುದು. ದಿನಾಂಕ 5.5.2001ರೊಳಗಾಗಿ ಚುನಾವಣೆ ನಡೆಸುವಂತೆ ಉಚ್ಚನ್ಯಾಯಾಲಯ ನಿರ್ದೇಶನ ಕೊಟ್ಟಿದ್ದರಿಂದ ಚುನಾವಣೆಗಳನ್ನು ನಡೆಸುವ ಬಗ್ಗೆ ರಾಜ್ಯದ ಚುನಾವಣಾಯುಕ್ತರು ಈಗಾಗಲೇ ಕ್ರಮ ಕೈಗೊಂಡಿದ್ದಾರೆ.

ಶ್ರೀ ಆರಗಜ್ಞಾನೇಂದ್ರ: ಚುನಾವಣೆ ನಡೆಸುತ್ತೀರಿ. ಈಗಾಗಲೇ ಅಸೈನ್‌ಮೆಂಟ್ ಆಗಿದೆ. ಕ್ಷೇತ್ರ ವಿಂಗಡಣೆಯಾಗಿ ಈಗಾಗಲೇ ತಾವು ಹೈಕೋರ್ಟಿಗೆ ಕೊಟ್ಟಿದ್ದೀರಿ. ಅದನ್ನು